

# ತನ್ನತನದ ಪನ್ನತಿಕೆ

ಕಲೆ: ಕೌಶಿಕ್

ಸಿದ್ಧ ಜಾಡಿನಲ್ಲಿ ನದಿ ಹರಿಯುವಂತೆ, ಸಾಹಿತಿಯೂ ಸೇರಿದಂತೆ ಎಲ್ಲ ಕಲಾವಿದರು ತಮ್ಮ ಕಲಾ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೆ. ಆದರೆ, 'ತಮ್ಮತನದ ಪನ್ನತಿಕೆ'ಗೆ ಹಂಬಲಿಸುವ ಕೆಲವು ಕಲಾವಿದರಿಗೆ 'ಅನ್ಯರೊರೆದುದನೆ ಬರೆದುದನೆ' ಮತ್ತೆ ತಾನೂ ಸೃಜಿಸುವುದರಲ್ಲಿ ತೃಪ್ತಿ ದೊರಕುವುದಿಲ್ಲ. ಅಂಥವರು, ಕಲೆಗೆ ಹೊಸ ಸಾಧ್ಯತೆಗಳನ್ನು ತಂದುಕೊಡುವ ಪ್ರಯೋಗಗಳಲ್ಲಿ ತೊಡಗಿಕೊಳ್ಳುತ್ತಾರೆ; ಹೆದ್ದಾರಿಗೆ ಹೊಂದಿಕೊಂಡಂತೆಯೇ ಹೊಸ ದಾರಿಗಳನ್ನು ಸೃಷ್ಟಿಸುತ್ತಾರೆ. ಆ ಪ್ರಯೋಗಗಳ ಮೂಲಕ ಕಲೆಗೆ ಹೊಸ ಭಾವ-ಬಣ್ಣ ಮತ್ತು ಹೊಳಪು ದಕ್ಕುತ್ತದೆ. ಹಾಗೆ ಭಿನ್ನ ದಾರಿಯಲ್ಲಿ ನಡೆದು ತನ್ನತನದ ಪನ್ನತಿಕೆ ರೂಪಿಸಿಕೊಂಡ ಕಲಾವಿದರಲ್ಲೊಬ್ಬರು ಲಕ್ಷ್ಮಣದಾಸ್. ನಾಡಿನ ಕಲಾಪ್ರಕಾರಗಳಲ್ಲೊಂದಾದ ಹರಿಕಥೆಗೆ ಹೊಸ ರೂಪು ನೀಡಿದ ಕೀರ್ತಿ ಅವರದು. ಹರಿಕಥಾಕೀರ್ತನೆ ಲಕ್ಷ್ಮಣದಾಸ್ ಅವರ ಮೂಲಕ ಪೌರಾಣಿಕ ಪ್ರಭಾವಳಿಯಿಂದ ಹೊರಬಂದು 'ಜನಕಥಾಕೀರ್ತನ' ಆದುದು ಕಲಾಲೋಕದಲ್ಲಿನ ಸದ್ದಿಲ್ಲದ ಕ್ರಾಂತಿ. ತಳ ಸಮುದಾಯದಿಂದ ಬಂದು ಕೀರ್ತನಕಾರರ ಸಾಲಿನಲ್ಲಿ ಗುರ್ತಿಸಿಕೊಂಡ ಹಿರಿಮೆ ಅವರದು. ಅಂಬೇಡ್ಕರ್, ಪಂಪ-ರನ್ನರ ಕುರಿತು ಕಥಾಕೀರ್ತನೆ ಮಾಡಿ ಸೈ ಅನ್ನಿಸಿಕೊಂಡ, ರಂಗಭೂಮಿಯಲ್ಲೂ ಹೆಜ್ಜೆಗುರುತು ಮೂಡಿಸಿರುವ ವಿಶಿಷ್ಟ ಕಲಾವಿದ ಲಕ್ಷ್ಮಣದಾಸ್ ಅವರ ಸಂದರ್ಶನ ಈ ಸಂಚಿಕೆಯ ವಿಶೇಷಗಳಲ್ಲೊಂದು. ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಜನ್ಮಶತಾಬ್ದಿ ಸಂಭ್ರಮ ನಾಡನ್ನು ನಿಧಾನವಾಗಿ ಆವರಿಸಿಕೊಳ್ಳುತ್ತಿರುವ ಸಂದರ್ಭದಲ್ಲಿ, ಕನ್ನಡದ ಕವಿ-ಕಾವ್ಯ ಮತ್ತು ಸಾಧನೆಯನ್ನು ನೆನಪಿಸಿಕೊಳ್ಳುವ ಬರಹ ಈ ಸಂಚಿಕೆಯ ಮತ್ತೊಂದು ವಿಶೇಷ.

ಮಯೂರದ ಪ್ರತಿ ಸಂಚಿಕೆಯೂ ಕಥೆಗಳ ವಿಶೇಷಾಂಕದಂತೆ ರೂಪುಗೊಳ್ಳುತ್ತಿದ್ದರೂ, ಈ ಸಂಚಿಕೆಯಲ್ಲಿನ ಕಥೆಗಳ ವೈವಿಧ್ಯ ಎದ್ದು ಕಾಣಿಸುವಂತಿದೆ. ವಿವಿಧ ಸಂವೇದನೆಗಳ, ತಲೆಮಾರಿನ ಕಥೆಗಳು ಇಲ್ಲಿ ಒಟ್ಟುಗೂಡಿವೆ; ಕನ್ನಡ ಕಥಾಲೋಕದ ಭಾವ-ಬಣ್ಣಗಳನ್ನು ಸೂಚಿಸುತ್ತಿವೆ.

**ಮಯೂರ ಬಳಗ**
editormy@mayura.co.in